ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರ ಕಾರ್ಯಾಲಯ,

ದಿನಾಂಕ: 02/10/2023

:: ಪತ್ರಿಕಾ ಪ್ರಕಟಣೆ ::

ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಬೆಳಗಾವಿ ನಗರ ಪ್ರವಾಸದ ಹಿನ್ನೆಲೆಯಲ್ಲಿ ಬೆಳಗಾವಿ ನಗರದಲ್ಲಿ ರಸ್ತೆ ಸಂಚಾರ ಮಾರ್ಗ ಬದಲಾವಣೆ.

ದಿನಾಂಕ: 03/10/2023 ರಂದು ಶ್ರೀ. ಸಿದ್ದರಾಮಯ್ಯ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ರವರು ಬೆಳಾವಿಯ ನೆಹರು ಕ್ರೀಡಾಂಗಣದಲ್ಲಿ ನಡೆಯುವ **"ಅಖಿಲ ಭಾರತೀಯ ರಾಷ್ಟ್ರೀಯ ಕುರುಬರ ಸಮಾವೇಶ ಮತ್ತು 9ನೇ ವಾರ್ಷಿಕ ರಾಷ್ಟ್ರೀಯ ಪ್ರತಿನಿಧಿಗಳ ಮಹಾ ಸಮಾವೇಶ ಹಾಗೂ ರಾಷ್ಟ್ರೀಯ ಸನ್ಮಾನ ಕಾರ್ಯಕ್ರಮ"** ದಲ್ಲಿ ಭಾಗವಹಿಸಲು ಬೆಳಗಾವಿ ನಗರಕ್ಕೆ ಆಗಮಿಸಲಿರುತ್ತಾರೆ. ಮಾನ್ಯರವರ ಪ್ರವಾಸ ಕಾರ್ಯಕ್ರಮದ ಸಮಯದಲ್ಲಿ *ದಿನಾಂಕ: 03/10/2023 ರಂದು ಬೆಳಿಗ್ಗೆ 07.00 ಗಂಟೆಯಿಂದ ಕಾರ್ಯಕ್ರಮ ಮುಕ್ತಾಯದವರೆಗೆ* ಈ ಕೆಳಗೆ ನಮೂದಿಸಿದಂತೆ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಮಾರ್ಗಗಳನ್ನು ಬದಲಿಸಲಾಗಿರುತ್ತದೆ. ಕಾರಣ ಸಾರ್ವಜನಿಕರು ಬೆಳಗಾವಿ ನಗರ ಪೊಲೀಸರೊಂದಿಗೆ ಸಹಕರಿಸಲು ಕೋರಲಾಗಿದೆ.

1. *ನಿಪ್ಪಾಣಿ, ಅಥಣಿ, ಚಿಕ್ಕೋಡಿ, ಸಂಕೇಶ್ವರ, ಯಮಕನಮರ್ಡಿ, ಕಾಕತಿ ಕಡೆಗಳಿಂದ ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರ ವಾಹನಗಳು ರಾಷ್ಟ್ರೀಯ ಹೆದ್ದಾರಿ-48 ರ ಮುಖಾಂತರ ನಿಸರ್ಗ ಢಾಬಾ ಎದುರಿಗಿನ ಸರ್ವಿಸ್ ರಸ್ತೆ ಮೂಲಕ ತ್ರೀನಗರ ಗಾರ್ಡನ್, ಶಿವಬಸವನಗರ ರಸ್ತೆಯಲ್ಲಿ ಜನರನ್ನು ಇಳಿಸಿ, ಮರಳಿ ನಿಸರ್ಗ ಢಾಬಾ, ಕೆಎಲ್ಇ ಛತ್ರಿ, ಹಿಂಡಾಲ್ಕೋ ಅಂಡರ್ ಬ್ರಿಡ್ಜ್ ಮೂಲಕ ಹಿಂಡಾಲ್ಕೋ ಮೈದಾನದಲ್ಲಿ ನಿಲುಗಡೆ ಮಾಡುವುದು.*
2. *ಗೋಕಾಕ, ಕಣಬರ್ಗಿ ಕಡೆಯಿಂದ ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರ ವಾಹನಗಳು ಕನಕದಾಸ ಸರ್ಕಲ್, ಅಶೋಕ ನಗರ ಮೂಲಕ ಎಸ್.ಜಿ.ಬಾಳೆಕುಂದ್ರಿ ಇಂಜನಿಯರಿಂಗ್ ಕಾಲೇಜ್ ಮೈದಾನದಲ್ಲಿ ವಾಹನಗಳನ್ನು ನಿಲುಗಡೆಗೊಳಿಸುವುದು.*
3. *ಬಾಗಲಕೋಟ, ರಾಮದುರ್ಗ, ಯರಗಟ್ಟಿ ಕಡೆಗಳಿಂದ ಕಾರ್ಯಕ್ರಮಕ್ಕೆ ಆಗಮಿಸುವ ವಾಹನಗಳು ಕನಕದಾಸ ವೃತ್ತ, ಅಶೋಕ ನಗರ, ಶಿವಬಸವ ನಗರ, ಕೆಪಿಟಿಸಿಎಲ್ ಕಲ್ಯಾಣ ಮಂಟಪ ಮಾರ್ಗವಾಗಿ ಕೆಪಿಟಿಸಿಎಲ್ ಪಾರ್ಕಿಂಗ್‌ದಲ್ಲಿ ವಾಹನಗಳನ್ನು ನಿಲುಗಡೆಗೊಳಿಸುವುದು.*
4. *ವೆಂಗುರ್ಲಾ, ಸಾವಂತವಾಡಿ, ಸುಳಗಾ ಕಡೆಗಳಿಂದ ಸಮಾರಂಭಕ್ಕೆ ಬರುವ ಸಾರ್ವಜನಿಕರು ಹಿಂಡಲಗಾ ಫಾರೆಸ್ಟ ನಾಕಾ, ಬಾಕ್ಸಾಯಿಟ್ ರಸ್ತೆ ಹಿಂಡಲಗಾ ಗಣೇಶ ಮಂದಿರ, ಗಾಂಧಿ ಸರ್ಕಲ್, ಪಾಯಿಂಟ ರೋಡ್, ಹನುಮಾನ ನಗರ ರಸ್ತೆ ಮೂಲಕ ನೆಹರು ನಗರ ರೆಡ್ಡಿ ಭವನ ಹತ್ತಿರ ಮೈದಾನದಲ್ಲಿ ವಾಹನಗಳನ್ನು ನಿಲುಗಡೆಗೊಳಿಸುವುದು.*

5. *ಖಾನಾಪೂರ, ಕಾರವಾರ, ಹಳಿಯಾಳ ಮಾರ್ಗವಾಗಿ ಕಾರ್ಯಕ್ರಮಕ್ಕೆ ಆಗಮಿಸುವ ವಾಹನಗಳು ಸರದಾರ ಮೈದಾನದಲ್ಲಿ ನಿಲುಗಡೆಗೊಳಿಸುವುದು.*

6. *ಚಿಕ್ಕೋಡಿ, ನಿಪ್ಪಾಣಿ, ಯರಗಟ್ಟಿ, ಬಾಗಲಕೋಟ, ವಿಜಯಪೂರ, ಗೋಕಾಕ ಕಡೆಗೆ ಸಂಚರಿಸುವ ಹಾಗೂ ಒಳ ಬರುವ ಕೆಎಸ್ಆರ್‌ಟಿಸಿ ಬಸ್ಸುಗಳು ಕಿಲ್ಲಾ ಕೆರೆ ಅಶೋಕ ವೃತ್ತ, ಲೇಕ್‌ವಿವ್ ಆಸ್ಪತ್ರೆ, ಕನಕದಾಸ ಸರ್ಕಲ್ ಮೂಲಕ ರಾಷ್ಟ್ರೀಯ ಹೆದ್ದಾರಿ 48 ಕ್ಕೆ ಸೇರಿ ಸಂಚರಿಸುವುದು.*

7. *ಹುಬ್ಬಳ್ಳಿ, ಧಾರವಾಡ, ಬೈಲಹೊಂಗಲ, ಸವದತ್ತಿ, ಕಿತ್ತೂರ ಹಿರೇಬಾಗೇವಾಡಿ ಕಡೆಗಳಿಗೆ ಸಂಚರಿಸುವ ಹಾಗೂ ಒಳಬರುವ ಕೆಎಸ್ಆರ್‌ಟಿಸಿ ಬಸ್ಸುಗಳು ಹಾಗೂ ಇನ್ನಿತರೆ ಎಲ್ಲ ವಾಹನಗಳು ಹಳೆ ಪಿ.ಬಿ. ರಸ್ತೆ, ಅಲಾರವಾಡ ಸರ್ವಿಸ್ ರಸ್ತೆ ಮುಖಾಂತರ ರಾಷ್ಟ್ರೀಯ ಹೆದ್ದಾರಿ 48 ಕ್ಕೆ ಸೇರಿ ಸಂಚರಿಸುವುದು.*

8. *ಖಾನಾಪೂರ ಕಡೆಗೆ ಸಂಚರಿಸುವ ಕೆಎಸ್ಆರ್‌ಟಿಸಿ ಬಸ್ಸುಗಳು ಕೇಂದ್ರ ಬಸ್ ನಿಲ್ದಾಣ ಸರ್ಕಲ್ (ಮಾರ್ಕೆಟ್ ಪೊಲೀಸ್ ಠಾಣೆ), ಸಂಗೊಳ್ಳಿ ರಾಯಣ್ಣ ವೃತ್ತ, ಚನ್ನಮ್ಮ ಸರ್ಕಲ್, ಕಾಲೇಜ್ ರಸ್ತೆ ಮೂಲಕ ಸಂಚಸುವುದು.*

9. *ಕೆಎಲ್ಇ ಆಸ್ಪತ್ರೆಗೆ ಬರುವ ತುರ್ತು ಅಂಬ್ಯೂಲನ್ಸ್ ವಾಹನಗಳಿಗೆ ಕೆಎಲ್ಇ ಛತ್ರಿ ಹಾಗೂ ಕೊಲ್ಲಾಪೂರ ಸರ್ಕಲ್ ಮೂಲಕ ಸಂಚರಿಸಲು ಅವಕಾಶ ಕಲ್ಪಿಸಲಾಗುವುದು.*

ಪೊಲೀಸ್ ಆಯುಕ್ತರು,
ಬೆಳಗಾವಿ ನಗರ